ದಿನಾಂಕ 15-07-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ ಎ.ಸಿ.ಸಿ., ವಕೀಲರಿಂದ:-

ನನ್ನ ಮದುವೆಯಾಗಿ 29 ವರ್ಷಗಳಾಗಿವೆ. ನನ್ನ ಮದುವೆಯಾದದ್ದು 1997ರಲ್ಲಿ. ನನ್ನ ತಂದೆ ಚೌಡಯ್ಯ ವ್ಯವಸಾಯ ಮಾಡಿಕೊಂಡು ಜೀವನ ಮಾಡಿಕೊಂಡಿದ್ದರು ಎಂದರೆ ಸರಿ. ತೆಂಗು, ಅಡಿಕೆ ಅಂತಹ ಆದಾಯ ಬರುವ ಯಾವುದೇ ಬೆಳೆಗಳನ್ನು ನನ್ನ ತಂದೆ ಬೆಳೆಯುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ವ್ಯವಸಾಯದ ಆದಾಯದಿಂದ ಕುಟುಂಬದ ಜೀವನ ನಿರ್ವಹಣೆ ಕಷ್ಟಕರವಾಗಿತ್ತು ಎಂದರೆ ಸರಿ. ನನ್ನ ತಂದೆ ನನ್ನ ಮದುವೆಯನ್ನು ನಮ್ಮ ಸಂಬಂಧಿಕರು ಜಾಸ್ತಿ ಇದ್ದು ವ್ಯವಸ್ಥೆಗೆ ತಕ್ಕಂತೆ ಮದುವೆ ಮಾಡಿದ್ದಾರೆ ಎಂದರೆ ಸರಿ. ನನ್ನ ಮದುವೆಗೆ ನನ್ನ ತಂದೆ ಸಾಲ ಸಹ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಯಾದಾಗಿನಿಂದ ನನ್ನ ಗಂಡನ ಮನೆಯಲ್ಲೇ ವಾಸ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆ ಒಬ್ಬರೇ ವ್ಯವಸಾಯ ಮಾಡಿಕೊಂಡು ಮುಂದುವರೆಯುತ್ತಿದ್ದರು ಎಂದರೆ ಸರಿ. 1ನೇ ವಾದಿಯ ಗಂಡ ಹೊರಗಡೆ ಇದ್ದು ತೀರಿಕೊಂಡರು ಎಂದರೆ ಸರಿ. ಅವರ ಮರಣಾ ನಂತರ 1ನೇ ವಾದಿ ಅವರ ತಂದೆಯ ಮನೆಯಲ್ಲೇ ಇದ್ದರು ಎಂದರೆ ಸರಿಯಲ್ಲ.

2. ನನ್ನ ತಂದೆ ಸಾಲ ತೀರಿಸಲು, ಕುಟುಂಬದ ಅವಶ್ಯಕತೆಗಾಗಿ ಕೆಲವು ಆಸ್ತಿಗಳನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿ ಕ್ರಯವಾದಾಗಿನಿಂದ ಸ್ವತ್ತುಗಳಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತುಗಳಲ್ಲದೇ ನಮ್ಮ ಕುಟುಂಬಕ್ಕೆ ಬೇರೆ ಸ್ವತ್ತುಗಳಿವೆ ಎಂದರೆ ಸರಿ. ನನ್ನ ತಂದೆ ಆಸ್ತಿ ಮಾರಾಟ ಮಾಡುವ ಕಾಲಕ್ಕೆ ನನ್ನ ತಂದೆ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿ. ಒಂದು ವೇಳೆ ನಿಮಗೆ ಭಾಗವಿದ್ದಲ್ಲಿ 3ನೇ ಪ್ರತಿವಾದಿಗೆ

ಮಾರಾಟ ಮಾಡಿರುವ ಸ್ವತ್ತುಗಳನ್ನು ಹೊರತುಪಡಿಸಿ ಉಳಿದ ಸ್ವತ್ತುಗಳಲ್ಲಿ ಭಾಗ ತೆಗೆದುಕೊಳ್ಳಬಹುದು ಎಂದರೆ ಸಾಕ್ಷಿಯು ಎಲ್ಲಾ ಸ್ವತ್ತುಗಳಲಿ ಭಾಗ ಬೇಕೆಂದು ನುಡಿಯುತ್ತಾರೆ. 3ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 6(ಎ) ಯಿಂದ 6(ಡಿ) ನಮ್ಮ ಕುಟುಂಬಕ್ಕೆ ಸೇರಿದವರಲ್ಲ. ಭಾಗ್ಯಮ್ಮರವರು ಈ ದಾವೆಯಲ್ಲಿ ಪಾರ್ಟಿಯಾಗಿಲ್ಲ ಎಂದರೆ ಗೊತ್ತಿಲ್ಲ. ಭಾಗ್ಯಮ್ಮ ಎಂಬುವವರು ಈ ದಾವೆಯಲ್ಲಿ ಪಾರ್ಟಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

<u>ಪಾಟೀ ಸವಾಲು 6ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ ವಿ.ಎಸ್.ಎಸ್., ವಕೀಲರಿಂದ:-</u>

ಈ ಕೇಸನ್ನು ಲಕ್ಷ್ಮಮ್ಮ ಮತ್ತು ವಾಣಿ ಸಲ್ಲಿಸಿದ್ದಾರೆ. 1ನೇ ವಾದಿ ನನ್ನ ಅಣ್ಣನ ಪತ್ನಿ. 2ನೇ ವಾದಿ ನನ್ನ ಅಣ್ಣನ ಮಗ. ಶಿವರಾಮು 1ನೇ ವಾದಿ ಪತಿ, 2ನೇ ವಾದಿಯ ತಂದೆ. ಶಿವರಾಮಯ್ಯರವರ ತಂದೆಯ ಹೆಸರು ಚೌಡಯ್ಯ. ಸದರಿ ಚೌಡಯ್ಯರವರಿಗೆ ಭಾಗ್ಯಮ್ಮ ಎಂಬ ಪತ್ನಿ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಫೋಟೋವನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ, ಇದು ನಿಮ್ಮ ತಂದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಎಸ್.ಎಸ್.ಎಲ್.ಸಿ.,ವರೆಗೆ ಕಲಿತಿದ್ದೇನೆ. ನಿಡಿ-8ರಲ್ಲಿ ಚೌಡಯ್ಯ ಎಂಬ ಹೆಸರಿದೆ ಎಂದರೆ ಸರಿ. ನಿಡಿ-8 ಪಡಿತರ ಚೀಟಿಯಲ್ಲಿರುವ ಫೋಟೋ ಚೌಡಯ್ಯರವರದ್ದು ಎಂದರೆ ಸಾಕ್ಷಿಯು ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಸದರಿ ಫೋಟೋದಲ್ಲಿ ಪಂಚೆ ಧರಿಸಿ ನಿಂತಿರುವ ವ್ಯಕ್ತಿ ನಿಮ್ಮ ತಂದೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ-9 ಎಂದು ಗುರುತಿಸಲಾಯಿತು. ನಿಡಿ-9ರಲ್ಲಿರುವ ವ್ಯಕ್ತಿ ನಿಡಿ-8 ಪಡಿತರ ಚೀಟಿಯಲ್ಲಿರುವ ಚೌಡಯ್ಯ ಎಂಬ ವ್ಯಕ್ತಿ ಒಬ್ಬರೇ ಎಂದರೆ ಸರಿ. ನ್ಯಾಯಾಲಯದ ಮುಂದೆ ನಿಂತಿರುವ ಭಾಗ್ಯಮ್ಮರವರನ್ನು ತೋರಿಸಿ ಇವರನ್ನು

ನೋಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-8 ಪಡಿತರ ಚೀಟಿಯಲ್ಲಿರುವ ಭಾಗ್ಯಮ್ಮ, ನ್ಯಾಯಾಲಯದ ಮುಂದೆ ನಿಂತಿರುವ ಭಾಗ್ಯಮ್ಮ ಒಬ್ಬರೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-9 ಫೋಟೋದಲ್ಲಿರುವ ಮಹಿಳೆ ಮತ್ತು ನಿಡಿ-8 ಪಡಿತರ ಚೀಟಿಯಲ್ಲಿರುವ ಭಾಗ್ಯಮ್ಮ ಒಬ್ಬರೇ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ನಿಂತಿರುವ ಭಾಗ್ಯಮ್ಮರವರು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-8 ಮತ್ತು ನಿಡಿ-9 ಫೋಟೋದಲ್ಲಿರುವ ಮಹಿಳೆ ಇಬ್ಬರೂ ಒಂದೇ ಎಂಬ ವಿಚಾರ ಗೊತ್ತಿದ್ದು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ತೀರಿಕೊಂಡು ಅಂದಾಜು 18 ವರ್ಷಗಳಾಗಿವೆ. ನನ್ನ ತಂದೆಯ ಫೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಿ ಇದರಲ್ಲಿರುವ ಫೋಟೋ ನಿಮ್ಮ ತಂದೆಯದ್ದು ಎಂದರೆ ಸಾಕ್ಷಿಯು ಹೌದು ಎಂದು ನುಡಿದು, ನಂತರ ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ನನ್ನ ತಂದೆ ದಿನಾಂಕ 29.09.2018ರಂದು ತೀರಿಕೊಂಡದ್ದು ಎಂದರೆ ಸರಿ. ನನ್ನ ತಂದೆಯ ತಿಥಿ ದಿನಾಂಕ 09.10.2018ರಂದು ಆಯಿತು ಎಂದರೆ ಸರಿ. ಈಗ ತೋರಿಸಿದ ಕಾರ್ಡಿನಲ್ಲಿ ಇಂತಿ ದುಃಖತಪ್ತರು ಮೃತರ ಧರ್ಮಪತ್ನಿ ಶ್ರೀಮತಿ ಭಾಗ್ಯಮ್ಮ, ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಕುಟುಂಬದವರು ಎಂದು ಇದೆ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸದರಿ ತಿಥಿ ಕಾರ್ಡನ್ನು ಸಾಕ್ಷಿಯು ಫೋಟೋ ಗುರುತಿಸಿದ್ದರಿಂದ ನಿಡಿ-10 ಎಂದು ಗುರುತಿಸಲಾಯಿತು.

3. ನನ್ನ ತಂದೆಯ ಮರಣಾ ಪ್ರಮಾಣಪತ್ರವನ್ನು ಪಡೆದುಕೊಂಡಿಲ್ಲ. ನನ್ನ ತಂದೆಯ ತಂದೆಯ ಹೆಸರು ಕೆಂಪೇಗೌಡ ಎಂದರೆ ಸರಿ. ನನ್ನ ತಂದೆಯ ತಾಯಿಯ ಹೆಸರು ವರದಮ್ಮ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಇದು ನಿಮ್ಮ ತಂದೆಯ ಮರಣ ಪ್ರಮಾಣಪತ್ರ ಎಂದರೆ ಸಾಕ್ಷಿಯು ಅದರಲ್ಲಿ

ಬರೆದಿರುವ ವಿಷಯ ಸರಿ, ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ಆ ದಾಖಲೆ ಸುಳ್ಳು ದಾಖಲೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರಣ ಪ್ರಮಾಣಪತ್ರದಲ್ಲಿ ಚೌಡಯ್ಯನ ಪತ್ನಿ ಶಾರದಮ್ಮ ಮತ್ತು ಭಾಗ್ಯಮ್ಮ ಎಂದು ಬರೆದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆ ಚೌಡಯ್ಯನ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಭಾಗ್ಯಮ್ಮನಿಗೆ ಪದ್ಮಮ್ಮ ಎಂಬ ಮಗಳಿದ್ದರು ಎಂದರೆ ಸರಿಯಲ್ಲ. ಪದ್ಮಮ್ಮ ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಪದ್ಮಮ್ಮನಿಗೆ ಮೂರು ಜನ ಹೆಣ್ಣು ಮಕ್ಕಳು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ಪದ್ಮಮ್ಮನಿಗೂ ಸಹ ಸಮಭಾಗದ ಹಕ್ಕಿದೆ ಎಂದರೆ ಸರಿಯಲ್ಲ. ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಅವರು ಯಾರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.